'ನೀನು ಸರಿ ಇಲ್ಲ. ಅದಕ್ಕೇ... ಎನ್ನುವ ಮಾತುಗಳು ನಂತರದ ದಿನಗಳಲ್ಲಿ ಪುನರಾವರ್ತನೆಯಾಗುತ್ತಲೇ ಬಂದವು. ಕೆರಳಿದಾಗಲೆಲ್ಲಾ ಅಮ್ಮನಿಗೆ ಹೀಗೆನ್ನುತ್ತಾ ಹೀನೈಸುತ್ತಿದ್ದಳು ಭಾಗ್ಯ. ಈ ಮಾತು ಕೇಳುವುದಕ್ಕೆಂದೇ ತಾನು ರಕ್ತ ನೀರು ಮಾಡಿಕೊಂಡು ಗೇಯ್ದಿದ್ದಾ? ಮಗಳನ್ನು ಇಷ್ಟೆತ್ತರಕ್ಕೆ ಬೆಳೆಸಿದ್ದಾ? ಏನಿದೆ ಇವಳ ಮನಸ್ಸಿನಲ್ಲಿ? ಮುಂದೊಮ್ಮೆ ಈ ಮಾತು ಬಂದಾಗ ಮಗಳ ಭುಜ ಹಿಡಿದು ಗಲಗಲ ಅಲುಗಿಸಿ ಕೇಳಿದ್ದಳು ಸರೋಜ,

"ಸರಿಯಿಲ್ಲ ಅಂದ್ರೆ ಏನರ್ಥ? ಹೇಳ್ಬೇಕು ನೀನು. ಹೇಳ್ಲೇಬೇಕು..."

"ಸುಮ್ಸುಮ್ನೆ ಅಪ್ಪ ನಿನ್ನನ್ನ ಬಿಟ್ಬಿಟ್ರಾ?"

"ಅವರು ಬಿಟ್ಟಿದ್ದಲ್ಲ ಕಣೇ. ನಾನು ಬಿಟ್ಟು ಬಂದಿದ್ದು. ಯಾಕೇಂತ ಹೇಳಿದೀನಿ ನಿಂಗೆ. ಅಮ್ಮನ ನಡವಳಿಕೇನ ಬೆಟ್ಟು ಮಾಡ್ತೀಯಲ್ಲ, ನೀನು ಆ ಪರಿಸ್ಥಿತೀಲಿದ್ದಿದ್ರೆ ಗೊತ್ತಾಗ್ತಿತ್ತು ನಿಂಗೆ. ಸ್ವಾಭಿಮಾನ ಅನ್ನೋದು ಒಂದಿರುತ್ತೆ ಕಣೇ..."

"ಅದೇ, ಅದೇ. ಎಲ್ಲಾ ಅತಿಯಾಯ್ತು ನಿಂದು. ಅದಕ್ಕೇ ಹೇಳ್ತಿರೋದು, ನೀನು ಸರಿಯಿಲ್ಲ ಅಂತ..."

ಉಫ್, ಅಷ್ಟೇನಾ? ತನ್ನ ಸ್ವಾಭಿಮಾನ ಇವಳ ಕಣ್ಣಲ್ಲಿ ಅತಿಯಾಗಿ ಕಂಡು ಅದು ಸರಿಯಲ್ಲ ಅನಿಸಿದರೆ ತೀರಾ ತಲೆ ಕೆಡಿಸಿಕೊಳ್ಳಬೇಕಾದ್ದೇನಿಲ್ಲ. ಬಿಟ್ಟು ಬಿಡು. ಮಗಳ ಮಾತನ್ನು ಮನಸ್ಸಿನಿಂದ ಕಿತ್ತು ಬಿಸಾಕಿಬಿಡು. ಈ ನಿರ್ಧಾರದೊಂದಿಗೆ ಮಗಳ ಮಾತಿನಿಂದ ಉಂಟಾಗುತ್ತಿದ್ದ ಘಾಸಿಯ ಪರಿಣಾಮ ಕೂಡಾ ಮೊನಚು ಕಳೆದುಕೊಂಡು ಮೊಂಡಾಗತೊಡಗಿ, ಈಗ ಇದೇನು ಹೊಸ ವೇಷ ಕಟ್ಟುತ್ತಿದ್ದಾಳೆ ಮಗಳು, ಅಮ್ಮನನ್ನು ನೋವಿನ ಕೂಪದಲ್ಲಿ ಅದ್ದಲು? ನಮ್ಮ ಮನಸ್ಸಿನ ಸುಖ, ಸಂತೋಷ, ಸಮಾಧಾನಗಳನ್ನು ನಮ್ಮ ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕೇ ವಿನಾ ಅನ್ಯರ ಕೈಗೊಪ್ಪಿಸಿದರೆ ಸಂಕಟ ನಿಶ್ಚಯ. ಮಗಳನ್ನು ಅನ್ಯಳೆಂದುಕೊಳ್ಳಬೇಕಾದ ಪರಿಸ್ಥಿತಿಗೆ ಪಕ್ಕಾಗಬೇಕಾದ ತನ್ನ ದುರ್ವಿಧಿಗೆ ವ್ಯಥೆ ಆಗುತ್ತಿದ್ದರೂ ಮಗಳು ಅನ್ಯಳಾಗಿಬಿಟ್ಟಿದ್ದಾಳಲ್ಲ, ಹೆತ್ತು ಸಾಕಿದವಳನ್ನು ಕಡೆಗಣಿಸಿ...

★★★

ಮೈಯೆಲ್ಲಾ ಕಿವಿಯಾಗಿ ನಿರೀಕ್ಷಿಸುತ್ತಿದ್ದ ಆ ಗಳಿಗೆ ಆ ದಿನ ಕೂಡಿ ಬಂತು. ಬಲಮಗ್ಗುಲಲ್ಲಿ ಎದ್ದಿದ್ದೆನಾ? ಮಗಳಲ್ಲದೆ ಮತ್ಯಾರು ಫೋನ್ ಮಾಡುವವರಿದ್ದಾರೆ? ಗಡಬಡಿಸಿ ಫೋನ್ ಎತ್ತಿಕೊಂಡಳು ಸರೋಜ. ಅತ್ತ ಕಡೆಯಿಂದ ಮಗಳು ಆರ್ಡರು ಮಾಡುತ್ತಿದ್ದಾಳೆ,

"ನಾಡಿದ್ದು ನಿನ್ನ ಅಳಿಯ ಕಾರು ಕಳಿಸ್ತಾರೆ. ಹೊರಡೋಕೆ ರೆಡಿಯಾಗಿರು..."

"ಇದ್ದಕ್ಕಿದ್ದ ಹಾಗೆ ನಾಡಿದ್ದು ಅಂದ್ಬಿಟ್ರೆ?" ಒಳಗಿನ ಅಸಮಾಧಾನ ಅಸಹನೆಯ ಮಾತಾಡಿಸಿತು.

"ಗೊತ್ತಿರ್ಲಿಲ್ವ ನಿಂಗೆ, ಡೆಲಿವರಿ ಡೇಟ್ ಹತ್ರ ಬಂದಿದೆ..."

"......"

"ನಿಂಗೆ ಸಿಟ್ಟು ಬಂದಿದೆ, ನಂಗೊತ್ತು..."

"ನನ್ನ ಸಿಟ್ಟು ಕಟ್ಕೊಂಡು ನಿಂಗೇನಾಗ್ಬೇಕಾಗಿದೆ? ಇಷ್ಟಕ್ಕೂ ಯಾರು ನಾನು?"

ನಕ್ಕಳು ಮಗಳು.

"ನೀನ್ಯಾರು ಅಂತ ನಿಂಗೇ ಗೊತ್ತಿಲ್ವಾ ಅಮ್ಮ? ನೀನು ನನ್ನಮ್ಮ..."

"ಯಾವೂರ ಅಮ್ಮ? ಫೋನ್ ಮಾಡಿದ್ರೆ ಎತ್ತಿಲ್ಲ, ನೀನೂ ಫೋನ್ ಮಾಡ್ಲಿಲ್ಲ. ಅಮ್ಮ ಒಬ್ಳಿದಾಳೆ ಅಂತ ಮರೆತೇಹೋಗಿತ್ತು ಅಲ್ವಾ?" ಗದ್ಗದವಾಯಿತಾ ಕಂಠ? ಮಗಳು ಅನುನಯಿಸುತ್ತಿದ್ದಾಳೆ,

"ಸಾರೀ ಅಮ್ಮಾ, ತಪ್ಪಾಯ್ತು."

"ಸಾರೀ ಅಂದ್ಕೂಡ್ಲೆ ಮಾಡಿದ್ದೆಲ್ಲಾ ಸರಿಯಾಗಿಬಿಡುತ್ತಾ? ಏನು ರೋಗ ಬಡಿದಿತ್ತು ನಿಂಗೆ?"